**ದಿನಾಂಕಃ 10.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

ಸರ್ವೇ ನಂ. 143 ರಲ್ಲಿ ನನ್ನ ತಮ್ಮ 10 ನೇ ಪ್ರತಿವಾದಿಗೆ ಯಾವ ಕಡೆಗೆ ವಿಭಾಗ ಪತ್ರದಲ್ಲಿ ಆಸ್ತಿ ಬಂದಿತ್ತು ಎಂದು ಹೇಳಲಾಗುವುದಿಲ್ಲ. ಸರ್ವೇ ನಂ. 143 ರಲ್ಲಿ ನನ್ನ ತಮ್ಮ ಮೃತ ನಾಗರಾಜು ಪೂರ್ವದ ಕಡೆಗೆ ವಿಭಾಗ ಪತ್ರದಲ್ಲಿ ಆಸ್ತಿ ಬಂದಿತ್ತು . ಪೂರ್ವದ ಕಡೆಯ ಆಸ್ತಿಯ ಚೆಕ್ಕು ಬಂಧಿ ಹೇಳಲಾಗುವುದಿಲ್ಲ. ವಿಭಾಗ ಪತ್ರದಲ್ಲಿ ಅವರವರ ಭಾಗಕ್ಕೆ ಬಂಧ ಆಸ್ತಿಯ ಚೆಕ್ಕು ಬಂಧಿ ನಮೂದು ಮಾಡಿರುವುದಿಲ್ಲ. ಸದರಿ ವಿಭಾಗ ಪತ್ರದಲ್ಲಿ ಚೆಕ್ಕು ಬಂಧಿ ನಮೂದು ಮಾಡಲು ತೊಂದರೆ ಇರಲಿಲ್ಲ. ವಿಭಾಗ ಪತ್ರ ಯಾರು ಬರೆದರು ಮತ್ತು ಎಲ್ಲಿ ಬರೆದರು ನನಗೆ ಗೊತ್ತಿಲ್ಲ. ವಿಭಾಗ ಪತ್ರ ವನ್ನು ಯಾವ ಯಾವ ದಾಖಲೆಗಳ ಆಧಾರದ ಮೇಲೆ ಬರೆದರು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ. 680 ಮಾರಾಟ ಆಗಿದೆ ಎಂದು ನಾನು ಹೇಳಿದ್ದು ಖರೀದಿದಾರರಿಗೆ ನಾನು ನೋಟಿಸು ಕೊಟ್ಟಿರುವುದಿಲ್ಲ. ನಾನು 5 ನೇ ಪ್ರತಿವಾದಿ ಯಾಗಲಿ ಖರೀದಿದಾರರ ವಿರುದ್ದವಾಗಲಿ ನನಗೆ 85 ಸೆಂಟ್ಸ, ಸರ್ವೇ ನಂ. 680 ರಲ್ಲಿ ವಿಭಾಗವಾಗಿ ಬಂದಿತ್ತು ಎಂದು ಅವರ ವಿರುದ್ಧ ದಾವೆ ಹಾಕಿರುವುದಿಲ್ಲ. ವಿಭಾಗ ಪತ್ರ/ ನಿಡಿ–1 ರಂತೆ ಆಗುವ ಪೂರ್ವದಲ್ಲಿ ನನ್ನ ಹೆಸರಿಗೆ ಸರ್ವೇ ನಂ. 143 ಕ್ಕೆ ಸಂಬಂಧಪಟ್ಟಂತೆ 0.15 ಸೆಂಟ್ಸಗೆ ಪಹಣಿ ಆಗಿರುವುದಿಲ್ಲ. ನಿಡಿ–1 ರಂತೆ ನಾನು ಮತ್ತು ನನ್ನ ಮಕ್ಕಳು ಸೇರಿ ವಿಭಾಗ ಮಾಡಿಕೊಂಡಿದ್ದೆವೆ ಎಂದರೆ ಸರಿ. ನಿಡಿ–1 ನ್ನು ಯಾವ ದಾಖಲೆ ಆಧಾರದ ಮೇಲೆ ಮಾಡಿದ್ದೇವೆ ಎಂದು ಹೇಳಲಾಗುವುದಿಲ್ಲ. ನಿಡಿ–1 ರಲ್ಲಿ ಸದರಿ ದಾಖಲೆಯನ್ನು ಯಾವ ಆಧಾರದ ಮೇರೆಗೆ ಮಾಡಿದ್ದೇವೆ ಎಂದು ಬರೆಸಲು ತೊಂದರೆ ಇರಲಿಲ್ಲ. ನಿಡಿ–1 ನ್ನು ಮಾಡುವ ಪೂರ್ವದಲ್ಲಿ ನನ್ನ ತಮ್ಮ ವಾದಿಗೆ ನೋಟಿಸು ಕೊಟ್ಟಿರುವುದಿಲ್ಲ. ನಿಡಿ–1 ರಲ್ಲಿ 4 ಜನ ಭಾಗ ಮಾಡಿಕೊಂಡಿದ್ದೇವೆ. 4 ಜನರಿಗೆ ಬಂದ ಆಸ್ತಿಯ ಚೆಕ್ಕು ಬಂಧಿ ಹೇಳಲಾಗುವುದಿಲ್ಲ. ನಿಡಿ–1 ರ ಆಧಾರದ ಮೇರೆಗೆ ಇತ್ತಿಚೆಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿ. ಪ್ರತಿವಾದಿ 2 ರಿಂದ 4 ರವರಿಗೂ ಕೂಡ ನಿಡಿ–1 ರ ಆಧಾರದ ಮೇರೆಗೆ ಖಾತೆ ಆಗಿದೆ ಎಂದರೆ ಸರಿ. ಶೆಡ್ಯೂಲ್ ಬಿ ಇಂದ ಇ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಪೋಡಿ ಮಾಡಿಸಿದ್ದೇನೆ ಆ ಬಗ್ಗೆ ನಾನು ವಾದಿಗೆ ನೋಟಿಸು ಕೊಟ್ಟಿರುವುದಿಲ್ಲ. ಪೋಡಿ ಮಾಡಲು ಪಂಚಾಯಿತಿ ಯವರು ಬಂದಿದ್ದರು ಯಾವ ತಿಂಗಳು ಎಂದು ನನಗೆ ನೆನಪಿರುವುದಿಲ್ಲ. ಪ್ರತಿವಾದಿ 5 ರಿಂದ 10 ರವರ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆ ಆಗಿದೆಯಾ ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೆಯಲ್ಲಿ ಏನೇನು ದಾಖಲೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಈ ದಾವೆಯಲ್ಲಿ ಏನು ಪರಿಹಾರ ಕೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಏನು ತಕರಾರು ಸಲ್ಲಿಸಿದ್ದೇನೆ ಎಂದು ಗೊತ್ತಿಲ್ಲ. ಪ್ರತಿವಾದಿ 3 ಮತ್ತು 4 ರವರು ಬೆಂಗಳೂರಿನಲ್ಲಿ ವಾಸ ವಿರುತ್ತಾರೆ. ಪ್ರತಿವಾದಿ 2 ರವರು ಮೈಸೂರಲ್ಲಿ ವಾಸವಿರುತ್ತಾರೆ .

ದಿನಾಂಕ 19.09.1995 ರಲ್ಲಿ ಆದ ವಿಭಾಗ ಪತ್ರ ವಾದಿ ಯ ಬಳಿ ಇದೆ . 1995 ನೇ ಇಸವಿಯಲ್ಲಿ ಭಾಗ ಮಾಡಲು ಬಂದಾಗ ಸದರಿ ದಾಖಲೆ ವಾದಿ ಬಳಿ ಇರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ . ನನ್ನ ತಂದೆ ಹೆಸರಿಗೆ 2 ಮನೆಗಳು ಇದೆ ಎಂದು ನಾನು ಹೇಳಿದ್ದು ಆ ಬಗ್ಗೆ ದಾಖಲೆಯನ್ನು ಕೊಟ್ಟಿರುವುದಿಲ್ಲ . ಆ ಮನೆಗಳ ಬಗ್ಗೆ ಭಾಗ ಕೊಡಿ ಎಂದು ನಾವು ಯಾರು ದಾವೆ

ಹಾಕಿರುವುದಿಲ್ಲ. 9 ನೇ ಪ್ರತಿವಾದಿ ನನಗೆ ಅಕ್ಕ ಆಗಬೇಕು ಅವರು ಈ ಕೇಸಿನಲ್ಲಿ ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ಬೇರೆ ಯಾವುದೇ ಕೇಸು ಹಾಕಿರುವುದಿಲ್ಲ. ನಿಡಿ –1 ನ್ನು ನಾನು ವಾದಿಗಳಿಗೆ ಮೊಸ ಮಾಡಲು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಡಿ –1 ರ ಆಧಾರದ ಮೇರೆಗೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 19.09.1995 ರಂದು ವಿಭಾಗ ಆಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನಾಂಕ ಯಾವುದೇ ದಾಖಲೆ ಕೂಡ ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಯು ಸ್ವಾಧೀನ ಇದ್ದಾರೆ ಎಂದು ಹೇಳುವುದು ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಅಕ್ರಮವಾಗಿ ಮಾಡಿದ ಪಹಣಿಗಳ ಆಧಾರದ ಮೇರೆಗೆ ನಾನು ಸ್ವಾಧೀನ ದಲ್ಲಿ ಇದ್ದೇನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ ಎಂದು ಉತ್ತರಿಸಿ ಅಕ್ರಮವಾಗಿ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.